


International Journal of Kannada Research
www.kannadajournal.com

ISSN: 2454–5813
IJKR 2022; 8(1): 113-116
© 2022 IJKR
www.kannadajournal.com
Received: 26-11-2021
Accepted: 03-01-2022

**ಡಾ. ರವಿರಾಜ ಶೆಟ್ಟಿ**
ಕನ್ನಡ ಪ್ರಾಧ್ಯಾಪಕರು. ಜಿ. ಶಂಕರ್ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ, ಅಜ್ಜರಕಾಡು, ಉಡುಪಿ, ಕರ್ನಾಟಕ, ಭಾರತ

**Corresponding Author:**
**ಡಾ. ರವಿರಾಜ ಶೆಟ್ಟಿ**
ಕನ್ನಡ ಪ್ರಾಧ್ಯಾಪಕರು. ಜಿ. ಶಂಕರ್ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ, ಅಜ್ಜರಕಾಡು, ಉಡುಪಿ, ಕರ್ನಾಟಕ, ಭಾರತ

# ಕನ್ನಡ ಮಹಾಭಾರತಗಳು ಬೆಳೆದು ಬಂದ ಬಗೆ

**ಡಾ. ರವಿರಾಜ ಶೆಟ್ಟಿ**

## ಪರಿಚಯ

ಕನ್ನಡ ಸಾಹಿತ್ಯದಲ್ಲಿ ಮಹಾಭಾರತಗಳು ಕಾಲದಿಂದ ಕಾಲಕ್ಕೆ ವೈವಿಧ್ಯಮಯವಾಗಿ ತನ್ನ ಕಾಲದ ಅಗತ್ಯಕ್ಕೆ ಅನುಗುಣವಾಗಿ ಮಾರ್ಪಾಡಿನೊಂದಿಗೆ ಪ್ರಕಟವಾಗಿವೆ. ಮೂಲತಃ ಸಾವಿರ ಶ್ಲೋಕಗಳ ವ್ಯಾಸಭಾರತ ಲಕ್ಷ ಶ್ಲೋಕಗಳ ಗುರುಕೃತಿಯಾಗಿ ಅನೇಕ ಶ್ರೇಷ್ಠ ಕೃತಿಗಳ ಸೃಷ್ಟಿಗೆ ಕಾರಣವಾದದ್ದು ಇತಿಹಾಸ. ವೈದಿಕ, ಜೈನ, ಭಾಗವತ ಸಂಪ್ರದಾಯದ ಕಾಲಗಳಲ್ಲಿ ಆಯಾಯ ಮತಧರ್ಮದ ಚೌಕಟ್ಟಿಗೆ ಮತ್ತು ಪ್ರಭಾವಕ್ಕೆ ಒಳಗಾಗಿಯೇ ಸಾಕಷ್ಟು ಕೃತಿಗಳು ಮೂಡಿಬಂದವು. ಜನಪದ ಸಾಹಿತ್ಯದಲ್ಲಿಯೂ ಮಹಾಭಾರತ ಕಥೆ ಹೊಸ ರೂಪಗಳೊಂದಿಗೆ ಬೆಳೆದು ಬಂದಿರುವುದನ್ನು ಕಾಣುತ್ತೇವೆ. ಹೊಸಗನ್ನಡ ಸಾಹಿತ್ಯದಲ್ಲಿಯೂ ಮಹಾಭಾರತ ಕಥೆ ವಿಭಿನ್ನ ಸಾಹಿತ್ಯ ಪ್ರಕಾರಗಳಲ್ಲಿ ಕಾಣಿಸಿಕೊಂಡಿದೆ.

"ಜಯ–ಭಾರತ–ಮಹಾಭಾರತ" ಇದು ನಮ್ಮ ರಾಷ್ಟ್ರೀಯ ಗ್ರಂಥವೆಂದು ಕರೆಯಿಸಿಕೊಂಡ ಮಹಾಭಾರತ ಅರಳಿ ನಿಂತ ಬಗೆ. ಜಗತ್ತಿನ ಎಲ್ಲ ಭಾಷೆಗಳಲ್ಲೂ ಇದೊಂದು ಅದ್ವಿತೀಯ ಗ್ರಂಥವೆಂಬ ಹೆಗ್ಗಳಿಕೆಯೂ ಇದೆ. ಇದು ಕಾವ್ಯವೂ ಹೌದು, ಇತಿಹಾಸವೂ ಹೌದೆಂದು ಗುರುತಿಸಲಾಗಿದೆ. ಮುಖ್ಯವಾಗಿ ಮನಸ್ಸು ಮನಸ್ಸುಗಳ ಸಂಘರ್ಷ, ಸಮನ್ವಯ, ಸಂಶಯ, ಸಂಕಲ್ಪ, ಪ್ರಕೃತಿ ವಿಕೃತಿಗಳ ಚಿತ್ರ–ವಿಚಿತ್ರ ಮನಸ್ಥಿತಿಯ ಸ್ವಾರಸ್ಯಕರ ಕಥೆಯಾಗಿಯೂ ಗುರುತಿಸಲ್ಪಟ್ಟಿದೆ. ಹೀಗೆ ಪ್ರತಿ ತಲೆಮಾರು ಇದನ್ನು ಅಧ್ಯಯನ ಮಾಡಿದಾಗ ಮತ್ತೆ ಮತ್ತೆ ತನ್ನನ್ನೇ ಕಾಣುವಂತಾಗುತ್ತದೆ ಎಂಬ ಅಭಿಪ್ರಾಯಗಳು ಈ ಕಾವ್ಯದ ಶ್ರೇಷ್ಠತೆಯನ್ನು ಸೂಚಿಸುತ್ತದೆ.

ವೇದವ್ಯಾಸರು ಮಹಾಭಾರತದ ಕರ್ತೃ ಮಾತ್ರವಲ್ಲದೆ ಮಹಾಭಾರತ ಒಂದು ಪಾತ್ರವೂ ಆಗಿದ್ದಾರೆ ಎನ್ನುವುದು ಮುಖ್ಯವಾದ ಸಂಗತಿ. ಆದ್ದರಿಂದ ಕವಿಯ ಆತ್ಮಕಥೆ ಕಾವ್ಯದಲ್ಲಿ ಸ್ವಲ್ಪ ಮಟ್ಟಿಗಾದರೂ ನಿರೂಪಿತಗೊಂಡಿರಬೇಕೆಂಬ ಅಭಿಪ್ರಾಯವೂ ಇದೆ. ಮಹಾಭಾರತದ ಶ್ಲೋಕಗಳ ಸಂಖ್ಯೆಯ ವಿಷಯದಲ್ಲಿ 8,800, 24,000 ಹಾಗೂ 1 ಲಕ್ಷ ಎನ್ನುವ ಮೂರು ಹೇಳಿಕೆಗಳಿವೆ. ಈ ಕಥೆಯನ್ನು ಉಪದೇಶ ಮಾಡಿದವರು ಹಾಗೂ ಉಪದೇಶ ಪಡೆದವರಲ್ಲಿಯೂ ಮೂರು ಗುಂಪು ಕಾಣಿಸುತ್ತದೆ. ಅವರೆಂದರೆ ವ್ಯಾಸರು, ವೈಶಂಪಾಯನರು ಹಾಗೂ ಸೂತ ಪೌರಾಣಿಕರು. ಹೀಗೆ ವ್ಯಾಸಕೃತ ಮಹಾಭಾರತ ಬೆಳೆದು ಬಂದ ಬಗ್ಗೆ ಭಿನ್ನ ಭಿನ್ನ ಅಭಿಪ್ರಾಯಗಳಿವೆ. ಕನ್ನಡದ ಮನಸ್ಸುಗಳು ಮಹಾಭಾರತವನ್ನು ಸ್ವೀಕರಿಸಿ ಬೆಳೆಸಿದ ಪರಿ ಬಹುಮುಖಿಯಾದದ್ದು. ಹೀಗಾಗಿ ಕನ್ನಡದಲ್ಲಿ ವೈವಿಧ್ಯಮಯವಾದ ರೀತಿಯಲ್ಲಿ ಮಹಾಭಾರತಗಳ ಬೆಳವಣಿಗೆ ಮತ್ತು ಚರ್ಚೆ ಸಾಧ್ಯವಾಯಿತು. ವೇದಕ್ಕೆ ಸರಿ ಸಮಾನವಾದ ಗ್ರಂಥವೆಂದು ಗುರುತಿಸಿ "ಪಂಚಮವೇದ"ವೆಂಬ ಮಾನ್ಯತೆ ದೊರೆತಿದ್ದು, ಧರ್ಮದ ನೆಲೆಗಟ್ಟಿನ ಮೇಲೆ ನಿಲ್ಲಿಸಿ ಧರ್ಮ ಸಂಹಿತೆಯ ಆಧಾರದಲ್ಲಿ ತನ್ನ ಕಾಲದ ಭಾರತವಾಗಿ ಕವಿಗಳು ಕಂಡದ್ದು, ಈ ಎಲ್ಲಾ ಕಾರಣಗಳಿಂದ ಮಹಾಭಾರತ ಬಹುರೂಪಿಯಾಗಿ ಬೆಳೆದು ಬರಲು ಸಾಧ್ಯವಾಯಿತು. ಮಹಾಕವಿ ಕುವೆಂಪುರವರ ಅಭಿಪ್ರಾಯದಂತೆ ಮಹಾಭಾರತವು ಅನೇಕ ಮಹಾಪುರುಷರ ಜೀವನ ವಾಹಿನಿಯಿಂದ ಕೂಡಿದ ಕಲೆಯ ಬಲೆ, ಮಣಿಯ ಗಣಿ ಎನ್ನುವುದು ಮೇಲಿನ ಮಾತಿಗೆ ಪೂರಕ. ಮಹಾಭಾರತ ಕುರಿತು ನಡೆದಿರುವ ಅಧ್ಯಯನಗಳು ಬಂದಿರುವ ಲೇಖನಗಳು, ರಚಿತವಾದ ಕೃತಿಗಳು ಅಪಾರ ಸಂಖ್ಯೆಯಲ್ಲಿವೆ. ಈ ಲೇಖನದ ಮಿತಿಗೆ ಒಳಪಟ್ಟು ಪರಿಚಯಾತ್ಮಕ ನೆಲೆಯಲ್ಲಿ ಮಹಾಭಾರತಗಳು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಬೆಳೆದು ಬಂದ ಬಗೆಯನ್ನು ಚರ್ಚಿಸಿ ವಿಭಾಗಿಸಿ ನೋಡುವ ಪ್ರಯತ್ನವನ್ನು ಮಾಡಲಾಗಿದೆ.




ಜೈನ ಲೌಕಿಕ ಭಾರತಗಳು (ಮೊದಲ ಘಟ್ಟ): ಒಂಬತ್ತು ಹತ್ತನೆಯ ಶತಮಾನಗಳಲ್ಲಿ ವೈವಿಧ್ಯಮಯವಾಗಿ ಬೆಳೆದಿದ್ದ ಕನ್ನಡನಾಡು ರಾಜಕೀಯ ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಹೊಸ ಮನ್ವಂತರವನ್ನು ಸೃಷ್ಟಿಸಿತು. ಒಂದೆಡೆ ವೀರರಸಪೋಷಕವಾದ ಸನ್ನಿವೇಶ, ಇನ್ನೊಂದೆಡೆ ಭಕ್ತಿ ಪೋಷಕವಾದ ವಾತಾವರಣ ಸಾಮಾಜಿಕ ಜೀವನವನ್ನು ರೂಪಿಸುತ್ತಿತ್ತು. ಕಾಲ ದೇಶ ಪರಿಸರಗಳ ಪ್ರಭಾವದಲ್ಲಿ ಬೆಳೆಯುವ ಕವಿ ಅದರಿಂದ ಪ್ರೇರಣೆ ಪಡೆದು ತನ್ನಲ್ಲುಂಟಾದ ಸಂವೇದನೆಗಳಿಗೆ ರೂಪ ಕೊಟ್ಟು ತನ್ನ ಕಾಲದ ಸಮಷ್ಟಿ ಪ್ರಜ್ಞೆಯ ಸಂಕೇತವಾಗಿ ಮಹಾಕಾವ್ಯಗಳನ್ನು ಸೃಷ್ಟಿ ಮಾಡುತ್ತಾನೆ. ಹತ್ತನೆಯ ಶತಮಾನ ಸಾಹಿತ್ಯ ಚರಿತ್ರೆಯಲ್ಲಿ ವೈಭವದ ಸುವರ್ಣಯುಗ. ರಾಜಕೀಯವಾಗಿ ರಾಜಸತ್ತೆ ಮತ್ತು ಮತಸತ್ತೆಗಳ ಕಾಲ. ಪಂಪನಂತಹ ಕವಿಗಳು ಯುದ್ಧವೀರರಾಗಿದ್ದು, ರಾಜಾಶ್ರಯವನ್ನು ಪಡೆದು ಅರಸರನ್ನು ಕಾವ್ಯ ನಾಯಕನೊಂದಿಗೆ ಸಮೀಕರಿಸಿ ಬರೆಯುವ ಪರಂಪರೆಗೆ ನಾಂದಿ ಹಾಡಿದರು. ಮಹಾಭಾರತ ಕಥೆಯನ್ನು ತನ್ನ ಕಾಲದ ಭಾರತವಾಗಿ ಕಂಡರು.

ಮಹಾಭಾರತದ ಕಥೆಯನ್ನು ಆಧರಿಸಿ ರಚನೆಗೊಂಡಿರುವ ಉಪಲಬ್ಧ ಜೈನ ಲೌಕಿಕ ಕಾವ್ಯಗಳು ಎರಡು. ಒಂದು ಪಂಪಭಾರತ, ಇನ್ನೊಂದು ಗದಾಯುದ್ಧ. ಜಿನ ಸಂಸ್ಕೃತಿಯ ಮೆರಗನ್ನು ವಿಜೃಂಭಿಸಿದ ಮಹಾಕವಿ ಪಂಪನ ಲೌಕಿಕ ಕಾವ್ಯವೇ ಕನ್ನಡದ ಮೊಟ್ಟ ಮೊದಲ ಸಮಗ್ರ ಭಾರತ. ಪಂಪ ತನ್ನ ಕಾವ್ಯದಲ್ಲಿ "ಮುಂ ಸಮಸ್ತಭಾರತಮನಪೂರ್ವಮಾಗೆ ಸಲೆ ಪೇಳ್ದ ಕವೀಶ್ವರರಿಲ್ಲ" ವೆಂದು ಪಂಡಿತವರ್ಗದವರು ಹೇಳಲಾಗಿ ಅದರಂತೆ ಕಥಾ ಪ್ರಬಂಧವನ್ನು ಹೇಳಿದೆ ಎಂದಿದ್ದಾನೆ. ಪಂಪಭಾರತದ ನಂತರ ಬಂದ ಇನ್ನೊಂದು ಲೌಕಿಕ ಭಾರತ ರನ್ನನ "ಗದಾಯುದ್ಧ". ಪಂಪ ತನ್ನ ಕಾವ್ಯವನ್ನು ಸಮಸ್ತ ಭಾರತವೆಂದು ಕರೆದ ನಂತರ ರನ್ನನದು ಮಹಾಭಾರತದ ಸಿಂಹಾವಲೋಕನ ಕ್ರಮ. ರನ್ನನ ಕೈಯಲ್ಲಿ ಪ್ರತಿನಾಯಕ ದುರ್ಯೋಧನ ಜೀವಂತ ವ್ಯಕ್ತಿಯಾಗಿ ಮೂಡಿ ಬಂದಿದ್ದಾನೆ. ಒಟ್ಟಾರೆ ವೈದಿಕ ಧರ್ಮದ ಪ್ರಭಾವವಿದ್ದ ಕಾಲದಲ್ಲಿಯೇ ಜೈನ ಧರ್ಮದ ಪ್ರಬಲವಾದ ಹೋರಾಟ ಈ ಕಾಲದಲ್ಲಿ ಇದ್ದಂತೆ ಕಂಡು ಬಂದಿದೆ. ಪಂಪರನ್ನರ ಕಾವ್ಯಗಳು ಮಹಾಭಾರತ ಕಾವ್ಯಕ್ಕೆ ಹೊಸ ದಿಕ್ಕನ್ನು ತೋರಿಸಿದವು.

ಜೈನ ಆಗಮಿಕ ಕಾವ್ಯಗಳು ಜಿನಭಾರತಗಳು(ಎರಡನೆಯ ಘಟ್ಟ): ಜೈನರಲ್ಲಿ ಆಗಿ ಹೋದ ಇಪ್ಪತ್ನಾಲ್ಕು ತೀರ್ಥಂಕರರಲ್ಲಿ 22ನೇ ತೀರ್ಥಂಕರ ನೇಮಿನಾಥ. ಈತನ ಕುರಿತು ಕನ್ನಡದಲ್ಲಿ ಸಾಕಷ್ಟು ಸಾಹಿತ್ಯ ಮೂಡಿಬಂದಿದೆ. ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಭಾಷೆಗಳಲ್ಲಿ ನೇಮಿನಾಥನ ಕುರಿತು ಬಂದಿರುವ ಸಾಹಿತ್ಯ ಅವನ ಜನಪ್ರಿಯತೆಗೆ ಸಾಕ್ಷಿ. ಜೈನಕವಿಗಳು ಮಹಾಭಾರತದ ಕಥೆಗೆ ಜೈನ ದೀಕ್ಷೆಯ ಕವಚವನ್ನು ತೊಡಿಸಿ, ವರ್ತಮಾನ ಕಾಲದ 22ನೇ ತೀರ್ಥಂಕರನಾದ ನೇಮಿನಾಥನ ಚರಿತ್ರೆಯೊಂದಿಗೆ ಹರಿವಂಶ ಮತ್ತು ಕುರುವಂಶದ ಕಥೆಯನ್ನು ಬೆಸೆದಿದ್ದರ ಪರಿಣಾಮವಾಗಿ ನೇಮಿನಾಥ ಪುರಾಣ ಜಿನಭಾರತವಾಗಿ ರೂಪಾಂತರ ಹೊಂದಿತು.

ಕನ್ನಡ ಸಾಹಿತ್ಯದಲ್ಲಿ ನೇಮಿನಾಥನ ಚರಿತ್ರೆಯೊಂದಿಗೆ ಹರಿವಂಶ ಮತ್ತು ಕುರುವಂಶದ ಕಥೆ ಅಂತರ್ಗತಗೊಂಡು ಜಿನಭಾರತವಾಗಿ(ಜೈನ ಆಗಮಿಕ ಕಾವ್ಯಗಳು) ರೂಪುಗೊಂಡ ಕೃತಿಗಳ ಸಂಖ್ಯೆ ಒಂಬತ್ತು. ಮೊದಲ ಹಂತದಲ್ಲಿ ರಚನೆಯಾದ ಕ್ರಿ.ಶ ಸು 900ರಲ್ಲಿದ್ದ ಗುಣವರ್ಮನ ಹರಿವಂಶ, ಚಾವುಂಡರಾಯನ ಚಾವುಂಡರಾಯ ಪುರಾಣ (ಕ್ರಿ.ಶ. 973), ಕರ್ಣಪಾರ್ಯ ಬರೆದ ನೇಮಿನಾಥಪುರಾಣ (ಕ್ರಿ.ಶ. 1150), ನೇಮಿಚಂದ್ರನ ಅರ್ಧ ನೇಮಿ ಪುರಾಣ (ಕ್ರಿ.ಶ. 1180), ಬಂಧುವರ್ಮನ ಹರಿವಂಶಾಭ್ಯುದಯ (ಕ್ರಿ.ಶ. 1200), ಮಹಾಬಲ ಕವಿಯ ನೇಮಿನಾಥ ಪುರಾಣ (ಕ್ರಿ.ಶ. 1254). ಹಾಗೆಯೇ ಎರಡನೆಯ ಹಂತದಲ್ಲಿ ರಚನೆಯಾದ ವರ್ಣಕ ಕಾವ್ಯಗಳೆಂದರೆ ಸಾಳ್ವಕವಿಯ ಸಾಳ್ವಭಾರತ, 3ನೇ ಮಂಗರಸನ ನೇಮಿಜಿನೇಶ ಸಂಗತಿ ಹಾಗೂ ಬ್ರಹ್ಮಣಾಂಕನ ಜಿನಭಾರತ (ಕ್ರಿ.ಶ. 1800).

ವೈದಿಕ ಮಹಾಭಾರತಗಳು-ಭಾಗವತ ಸಂಪ್ರದಾಯ ಕಾಲದ ಭಾರತಗಳು(ಎರಡು ಘಟ್ಟಗಳಲ್ಲಿ): ವೈದಿಕ ಧರ್ಮದ ನೆಲೆಯನ್ನು ನಾವು ಮುಖ್ಯವಾಗಿ ಕಂಡುಕೊಳ್ಳುವುದು ರಾಮಾಯಣ ಮಹಾಭಾರತಗಳ ಮೂಲಕ. ಅದರಲ್ಲೂ ಮಹಾಭಾರತ ವೇದಕ್ಕೆ ಸರಿಸಮಾನವಾದ ಗ್ರಂಥವೆಂದು ಗುರುತಿಸಿ "ಪಂಚಮವೇದ"ವೆಂಬ ಖ್ಯಾತಿಯನ್ನು ಪಡೆಯಿತು. ವೈದಿಕ ಕವಿಗಳು ಭಾಗವತ ಸಂಪ್ರದಾಯವನ್ನು ನಿರೂಪಿಸಿ ಶ್ರೀ ಕೃಷ್ಣ ಭಕ್ತಿಯನ್ನು ಬಿತ್ತರಿಸುವ ಕೆಲಸ ಮಾಡಿದರು. ಆದ್ದರಿಂದಲೇ ಕುಮಾರವ್ಯಾಸ ಭಾರತ ಶ್ರೀ ಕೃಷ್ಣಚರಿತಾಮೃತವಾಗಿ ಕಂಗೊಳಿಸಿತು.

ಭಾಗವತ ಸಂಪ್ರದಾಯ ಕಾಲದ ಮೊದಲ ಘಟ್ಟದಲ್ಲಿ ರುದ್ರಭಟ್ಟನ ಜಗನ್ನಾಥ ವಿಜಯ (ಕ್ರಿ.ಶ. 1180) ಹಾಗೂ ಚೌಂಡರಸನ ನಳಚರಿತ್ರೆ (ಕ್ರಿ.ಶ. 1300) ವೈದಿಕ ಪರವಾದ ಕಥಾಂಶವುಳ್ಳವು. ಎರಡನೆಯ ಘಟ್ಟದ ವೈದಿಕ ಭಾರತಗಳಲ್ಲಿ ಕುಮಾರವ್ಯಾಸ ಕವಿಯ ಕರ್ನಾಟಕ ಭಾರತ ಕಥಾಮಂಜರಿಯೇ ಪ್ರಮುಖವಾದದ್ದು. ಇದರ ನಂತರ ಪರಮದೇವ ಕವಿ ವಿರಚಿತ ತುರಂಗ ಭಾರತ ಮಾತ್ರ ಸಮಗ್ರ ವೈದಿಕ ಭಾರತ ಕಾವ್ಯ. ಪಂಡಿತ ಪಾಮರರಿಂದ ಜನಪ್ರಿಯವಾದ ಶ್ರೀ ಕೃಷ್ಣ ಕೇಂದ್ರಿತವಾದ ಭಕ್ತಿ ಪ್ರಧಾನ ಕಾವ್ಯವೇ ಕುಮಾರವ್ಯಾಸ ಭಾರತ. ಮುಂದೆ ಇದೇ ಪರಂಪರೆಯಲ್ಲಿ ಜೈಮಿನಿ ಭಾರತ, ಭಾರತ ತಾತ್ಪರ್ಯ ಟೀಕೆ ಟಿಪ್ಪಣಿಗಳು ಬೆಳೆದು ಬಂದವು.

**ವೈದಿಕ ಮಹಾಭಾರತಗಳು:** ಭಾಗವತ ಸಂಪ್ರದಾಯ ಕಾಲದ ಭಾರತಗಳು-ಎರಡನೆಯ ಘಟ್ಟ:

| ಕ್ರ.ಸಂ | ಕವಿ | ಕೃತಿ | ಕಾಲ.ಕ್ರಿ.ಶ.ಸು |
|---|---|---|---|
| 1 | ಕುಮಾರವ್ಯಾಸ | ಕರ್ಣಾಟ ಭಾರತ ಕಥಾಮಂಜರಿ | 1400 |
| 2 | ತಿಮ್ಮಣ್ಣ ಕವಿ | ಕೃಷ್ಣರಾಜ ಭಾರತ | 1530 |
| 3 | ಚಾಟು ವಿಠಲನಾಥ | ಪೌಲೋಮಾಸ್ತಿಕ ಪರ್ವ | 1530 |

| | | | |
|---|---|---|---|
| 4 | ಸುಕುಮಾರ ಭಾರತಿ | ಚಾಯಣ ಭಾರತ | 1550 |
| 5 | ಕನಕದಾಸ | ನಳಚರಿತೆ | 1550 |
| 6 | ಲಕ್ಷ್ಮೀಶ | ಜೈಮಿನಿ ಭಾರತ | 1550 |
| 7 | ವಾದಿರಾಜ | ಭಾರತತಾತ್ಪರ್ಯ ನಿರ್ಣಯಟೀಕೆ | 1570 |
| 8 | ಗೋಪಕವಿ | ಚಿತ್ರಭಾರತ | 1581 |
| 9 | ಪ್ರಧಾನಿ ತಿರುಮಲಾಚಾರ್ಯ | ಕರ್ಣವೃತ್ತಾಂತ ಕಥೆ | 1600 |
| 10 | ಜಕ್ಕ ಭೂಪಾಲ | ಭಾರತ ಕಥಾ ಸಂಗ್ರಹ | 1620 |
| 11 | ಚಿಕ್ಕದೇವರಾಜ | ಚಿಕ್ಕದೇವರಾಜ ಭಾರತ | 1700 |
| 12 | ಶ್ರೀನಿವಾಸ ಕವಿ | ಭಾರತ ಸ್ತ್ರೀ ಪರ್ವ | 1700 |
| 13 | ಪರಮದೇವ | ತುರಂಗ ಭಾರತ | 1711 |
| 14 | ಲಕ್ಷ್ಯಕವಿ | ಭಾರತ | 1723 |
| 15 | ಕಳಲೆ ನಂಜರಾಜ | ಭಾರತ(ಅನುಪಲಬ್ಧ) | 1740 |
| 16 | ಶಾಲ್ಯದ ಕೃಷ್ಣರಾಜ | ನಳ ಚರಿತೆ ನಾಟಕ | 1748 |
| 17 | ಕೋನಯ್ಯ | ಗಯ ಚರಿತೆ | 1748 |
| 18 | ಹೆಳವನಕಟ್ಟೆ ಗಿರಿಯಮ್ಮ | ಚಂದ್ರಹಾಸನ ಕಥೆ | 1750 |
| 19 | ರಾಮ ಸವಾರಿ | ಇಂದ್ರಕೀಲ ಚೌಪದನ | 1748 |
| 20 | ಮುಮ್ಮಡಿಕೃಷ್ಣರಾಜ ಒಡೆಯರ | ಕೃಷ್ಣರಾಜವಾಣೀವಿಲಾಸ ಭಾರತ | 1794 |
| 21 | ಮಧ್ವದಾಸ | ಅಭಿಮನ್ಯುಮತ್ತುಚಿತ್ರಸೇನ ಕಾಳಗ | 1800 |
| 22 | ಲಿಂಗರಾಜ | ಗಯ ಚರಿತ್ರೆ | 1823–1874 |

ಹೊಸಗನ್ನಡ ಸಾಹಿತ್ಯ ಕಾಲದಲ್ಲಿ ಭಾರತಗಳು: ಹೊಸಗನ್ನಡ ಸಾಹಿತ್ಯದ ವಿಷಯಕ್ಕೆ ಭೂಮಿಕೆ ಸಿದ್ಧವಾದದ್ದು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಎಂದರೆ ತಪ್ಪಾಗಲಾರದು. ಇವರ ಕೃಷ್ಣರಾಜ ವಾಣಿವಿಲಾಸವೆಂಬ ಮಹಾಭಾರತದ ಟೀಕು ಈ ನಿಟ್ಟಿನಲ್ಲಿ ಬಹುಮುಖ್ಯವಾದ ಕೆಲಸ. ಈ ಕಾಲಕ್ಕೆ ಗದ್ಯ ಸಾಹಿತ್ಯ ತನ್ನ ಪ್ರಭಾವವನ್ನು ಬೀರಲು ಪ್ರಾರಂಭಿಸಿತು. ಮುಮ್ಮಡಿ ಕೃಷ್ಣರಾಜ ಒಡೆಯರ ನಂತರ ದೇವ ಶಿಖಾಮಣಿ ಅಳಸಿಗಂಗಾಚಾರ್ಯರು "ಶ್ರೀ ಮಹಾಭಾರತವೂ ಕರ್ನಾಟಕ ವಚನವೂ" ಎನ್ನುವ ಹೆಸರಿನಿಂದ 18 ಪರ್ವಗಳನ್ನು ಪ್ರಕಟಿಸಿದರು. ನಂತರ ಗಳಗನಾಥರು "ಮಹಾಭಾರತಾಮೃತ" ಎರಡು ಸಂಪುಟಗಳನ್ನು ತಂದು ಕಾರಣಾಂತರಗಳಿಂದ ನಿಲ್ಲಿಸಿದರು. ತದನಂತರದಲ್ಲಿ ಗುರುತಿಸುವ ಕೆಲಸ ನಡೆದದ್ದು ಭಾರತ ದರ್ಶನ ಪ್ರಕಾಶನ ಬೆಂಗಳೂರು ಇವರಿಂದ ವಿದ್ವಾನ್ ಎಚ್. ಎಸ್, ವರದೇಶಿಕಾಚಾರ್ಯರ ಅಧ್ಯಕ್ಷತೆಯಲ್ಲಿ ನಾಲ್ಕು ಜನರ ಸಂಪಾದಕ ಮಂಡಳಿಯಿಂದ " ಶ್ರೀ ಮನ್ಮಹಾಭಾರತ" ಗದ್ಯಾನುವಾದ 32 ಸಂಪುಟಗಳಲ್ಲಿ ಹೊರಬಂದದ್ದು. ಸಂಸ್ಕೃತ ಭಾರತವನ್ನು ಕನ್ನಡದಲ್ಲಿ ಅರ್ಥಮಾಡಿಕೊಳ್ಳಲು ಇರುವ ಉಪಯುಕ್ತ ಗ್ರಂಥ. ಸಾಮಾನ್ಯ ಓದುಗರು ಸಂಗ್ರಹಿಸಿಟ್ಟುಕೊಳ್ಳಲು ಸ್ವಲ್ಪ ಕಷ್ಟವಾದ ಕೆಲಸ.

ಹೊಸಗನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅತ್ಯುತ್ತಮ ಗ್ರಂಥ ಎ. ಆರ್ ಕೃಷ್ಣ ಶಾಸ್ತ್ರಿಗಳ ವಚನ ಭಾರತ. ಮೂಲ ಕಥೆಯ ಚೌಕಟ್ಟಿಗೆ ಭಂಗ ಬರದಂತೆ ತಿಳಿಯದ ಗದ್ಯ ಭಾಷೆಯಲ್ಲಿ ಮಹಾಭಾರತ ಕಥೆ ಒಂದೆಡೆಯಲ್ಲಿ ಸಿಗುವಂತೆ ಮಾಡಿದ ಶ್ರೇಯಸ್ಸು ಎ. ಆರ್ ಕೃಷ್ಣ ಶಾಸ್ತ್ರಿಗಳಿಗೆ ಸಲ್ಲುತ್ತದೆ. ಇದೇ ಸಂದರ್ಭದಲ್ಲಿ ತ.ಸು ಶಾಮರಾಯರ 'ಕಥಾಭಾರತ', ಎನ್ಕೆಯವರ 'ಕನ್ನಡ ಭಾರತ' ವ್ಯಾಸ ಭಾರತದ ಓದುಗರಿಗೆ ಮಾರ್ಗದರ್ಶಿ ಕೃತಿಗಳು. ಇವಲ್ಲದೆ ಅನೇಕ ಸರಳ ಭಾರತಗಳು, ಮಕ್ಕಳ ಭಾರತಗಳು ಪ್ರಕಟಗೊಂಡಿವೆ. ಪ್ರೊ. ಎಸ್. ನಾರಾಯಣಾಚಾರ್ಯರ "ಆ ಹದಿನೆಂಟು ದಿನಗಳು", ಮಹಾಭಾರತ ಪಾತ್ರ ಪ್ರಪಂಚ, ಇರಾವತಿ ಕರ್ವೆಯವರ 'ಯುಗಾಂತ' ಗಮನಿಸಬೇಕಾದ ಕೃತಿಗಳು. ಕೆ. ಅನಂತರಾಮರಾವ್ ಅವರ ಸಂಪೂರ್ಣ ಮಹಾಭಾರತ(18 ಪರ್ವಗಳು) ಓದುಗರಿಗೆ ಲಭ್ಯವಿದೆ.

ಹೊಸಗನ್ನಡ ಕಾಲ ಘಟ್ಟದಲ್ಲಿ ಮಹಾಭಾರತ ಕಥೆ ಕೇವಲ ಕಾವ್ಯಕ್ಕೆ ಸೀಮಿತವಾಗದೆ ಇತರ ಸಾಹಿತ್ಯ ಪ್ರಕಾರಗಳಲ್ಲಿಯೂ ಬೆಳವಣಿಗೆಯನ್ನು ಪಡೆಯಲಾರಂಭಿಸಿತು. ಭಾರತದ ಕಥೆ ವಿವಿಧ ಪ್ರಕಾರಗಳಲ್ಲಿ ಅರಳಿದರೂ ಮುಖ್ಯವಾಗಿ ನಾಟಕ ಮತ್ತು ಕಾದಂಬರಿಗಳಲ್ಲಿ ಜನಪ್ರಿಯತೆಯನ್ನು ಪಡೆಯಿತು. ಬಿ.ಎಂ ಶ್ರೀಯವರು 1925 ರಲ್ಲಿ ರನ್ನನ "ಗದಾಯುದ್ಧ"ವನ್ನು ದುಖಾಂತ ನಾಟಕವಾಗಿ ಪರಿವರ್ತಿಸಿದರು. ಅದಲ್ಲದೆ ಅಶ್ವತ್ಥಾಮನ್ ಬಿ.ಎಂ ಶ್ರೀಯವರ ಮುಖ್ಯವಾದ ನಾಟಕ, ಕುವೆಂಪುರವರ ಬೆರಳ್ಗೆ ಕೊರಳ್, ಕಾನೀನ, ಸ್ಮಶಾನ ಕುರುಕ್ಷೇತ್ರ, ಗೋವಿಂದ ಪೈಯವರ ಹೆಬ್ಬೆರಳು ಗಮನಾರ್ಹವಾದ ನಾಟಕ ಕೃತಿಗಳು. ಇವಲ್ಲದೆ ಕೃಷ್ಣಮೂರ್ತಿ ಪುರಾಣಿಕರ ರಾಧೇಯ, ಶಿವರಾಮಕಾರಂತರ ಕರ್ಣಾರ್ಜುನ, ಎ. ಎಸ್ ವೆಂಕಟಸುಬ್ಬರಾವ್ ಅವರ ತಾಯಿ ಮಕ್ಕಳು, ಪುಟ್ಟಸ್ವಾಮಿಯವರ ಕುರುಕ್ಷೇತ್ರ, ಶ್ರೀ ರಂಗರ ರಂಗಭಾರತ, ಜಿ. ಎಸ್ ಸಿದ್ಧಲಿಂಗಯ್ಯನವರ ಏಕಲವ್ಯ ಮುಂತಾದ ನಾಟಕಗಳು ಮಹಾಭಾರತದ ಕಥೆಯನ್ನು ಭಿನ್ನ ದೃಷ್ಟಿಕೋನದಿಂದ ನೋಡಿವೆ.

ಆಧುನಿಕ ಸಾಹಿತ್ಯದಲ್ಲಿ ಕಾದಂಬರಿ ಅತ್ಯಂತ ಜನಪ್ರಿಯತೆಯನ್ನು ಪಡೆದ ಪ್ರಕಾರ ಭಾರತದ ಕಥೆ ಕಾದಂಬರಿಗಳ ಮೂಲಕವೂ ಜನಪ್ರಿಯತೆಯನ್ನು ಪಡೆಯಿತು. ಎಸ್.ಎಲ್ ಬೈರಪ್ಪನವರ 'ಪರ್ವ' ಈ ದಿಸೆಯಲ್ಲಿ ಮೇರು ಕೃತಿ . ಪುರಾಣಪ್ರಜ್ಞೆಯನ್ನು ಬದಿಗಿರಿಸಿ ವಾಸ್ತವಿಕತೆಯ ಮೂಲಕ ಮಹಾಭಾರತವನ್ನು ಕಂಡಾಗ ಬಗೆಗಿನ ಹೊಸ ನೋಟ ಈ ಕಾದಂಬರಿಯಲ್ಲಿವೆ. ಇನ್ನು ವಂಶಿಯವರ ಮಹಾಭಾರತ, ಸತ್ಯಕಾಮರ ಆಹುತಿ, ಆದ್ಯರಾಮಾಚಾರ್ಯರ ಧನಂಜಯ ಗುರುತಿಸಬಹುದಾದ ಇತರ ಕಾದಂಬರಿಗಳು.

ಇದಲ್ಲದೇ ಹೊಸಗನ್ನಡದ ಇತರ ಸಾಹಿತ್ಯ ರೂಪಗಳಾದ ಸಣ್ಣಕಥೆ, ಗೀತರೂಪಕ, ಕವನಗಳ ಮೂಲಕವೂ ಮಹಾಭಾರತ ಕಥೆ ಹೊಸ ಹುಟ್ಟನ್ನು ಪಡೆಯುತ್ತಲೇ ಇದೆ. ಒಟ್ಟಾರೆ ಕಾವ್ಯರೂಪದಿಂದ ಕವನ, ಹನಿಗವನದ ರೂಪದವರೆಗೂ ಮಹಾಭಾರತ ಕತೆ ಹಬ್ಬಿ ಬೆಳೆಯುತ್ತಿದೆ. ಯಾಕೆಂದರೆ ಮಹಾಭಾರತ ಜನಜೀವನ ಕಥೆಯಾಗಿದೆ. ಪ್ರತಿಯೊಬ್ಬ ಕವಿಯಲ್ಲೂ ತನ್ನ ಕಾಲದ ಭಾರತವಾಗಿ ಕಂಡಾಗ ಈ ಎಲ್ಲ ಹೊಸ ಹುಟ್ಟುಗಳು ಕಾಣಸಿಗುತ್ತವೆ.

ಮಹಾಭಾರತದ ಕೆಲವು ಆಖ್ಯಾನ, ಸನ್ನಿವೇಶ, ಸಂದರ್ಭಗಳನ್ನು ಆರಿಸಿಕೊಂಡು ವೃತ್ತಿ ರಂಗಭೂಮಿಯ ಕಲಾವಿದರು ಹಾಗೂ ಯಕ್ಷಗಾನ ಕಲಾವಿದರು ಈ ನಿಟ್ಟಿನಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ.

ಯಕ್ಷಗಾನ ಕಲೆ ಕರ್ನಾಟಕ ಕರಾವಳಿ ಪರಿಸರದಲ್ಲಿ ಬೆಳೆದು ದೇಶ ವಿದೇಶಗಳ ಮಟ್ಟದಲ್ಲಿ ಖ್ಯಾತಿಯನ್ನು ಪಡೆದಿದೆ. ರಾಮಾಯಣ, ಮಹಾಭಾರತ, ಭಾಗವತ ಹಾಗೂ ಪುರಾಣ ಕಥೆಗಳೇ ಯಕ್ಷಗಾನ ಕಲೆಯ ಬೆನ್ನೆಲುಬು. ಯಕ್ಷಗಾನ ಪ್ರಸಂಗಗಳಲ್ಲಿ ಭೀಷ್ಮ ವಿಜಯ, ಕರ್ಣಾರ್ಜುನರ ಕಾಳಗ, ದ್ರೌಪದಿ ಸ್ವಯಂವರ, ಕೃಷ್ಣ ಸಂಧಾನ ಪ್ರಸಂಗಗಳು ಜನಪ್ರಿಯತೆಯ ಉತ್ತುಂಗಕ್ಕೇರಿದ ಪ್ರಸಂಗಗಳು. ಯಕ್ಷಗಾನದ ಪ್ರಭಾವದಿಂದಲೇ ಪರಮದೇವ ಕವಿಯ ತುರಂಗಭಾರತ ರಚಿತವಾದದ್ದನ್ನು ಇಲ್ಲಿ ಉಲ್ಲೇಖಿಸಬಹುದು.

ಹೀಗೆ ಕನ್ನಡದ ಮನಸ್ಸುಗಳು ಮಹಾಭಾರತ ಕಥೆಯನ್ನು ತನ್ನ ಕಾಲದ ಭಾರತವಾಗಿ ಕಂಡದ್ದರ ಪರಿಣಾಮವಾಗಿ ವೈವಿಧ್ಯಮಯ ರೀತಿಯಲ್ಲಿ, ಬಹುಮುಖಿಯಾಗಿ ವಿವಿಧ ಸಾಹಿತ್ಯ ರೂಪಗಳಲ್ಲಿ ಕಾಣಿಸಿಕೊಂಡಿದೆ. ಹೀಗಾಗಿ ಕನ್ನಡದಲ್ಲಿ ಮಹಾಭಾರತಗಳು ಜೈನ ಮತ್ತು ವೈದಿಕ ಭಾರತಗಳಾಗಿ ನಂತರ ಹೊಸಗನ್ನಡ ಸಾಹಿತ್ಯದಲ್ಲಿಯೂ ವಿವಿಧ ಪ್ರಕಾರಗಳಲ್ಲಿ ಮೂಡಿಬಂದಿದೆ. ಜನ ಸಾಮಾನ್ಯನಿಗೆ ತನ್ನ ಬದುಕಿನ ಅದೆಷ್ಟೋ ಸಮಸ್ಯೆಗಳಿಗೆ ಉತ್ತರ, ಸಾಂತ್ವನ ರೂಪದಲ್ಲಿ ಮಹಾಭಾರತ ಕಥೆ ಮುಖಾಮುಖಿಯಾಗುತ್ತಿದೆ.

**ಪರಾಮರ್ಶನ ಗ್ರಂಥಗಳು:**


1. ಪಂಪ ಒಂದು ಅಧ್ಯಯನ – ಸಂ. ಜಿ. ಎಸ್ ಶಿವರುದ್ರಪ್ಪ, ಪ್ರ: ಪ್ರಕಾಶನ ಬೆಂಗಳೂರು, 1991.
2. ಕನ್ನಡ ಸಾಹಿತ್ಯದಲ್ಲಿ ಕರ್ಣ – ಸಂ: ಡಾ. ವಿ.ಎಸ್ ಮಾಳಿ, ಪ್ರ: ಸಿರಿಗನ್ನಡ ಪ್ರಕಾಶನ, ಹಾರೂಗೇರಿ ಬೆಳಗಾವಿ, 1999.
3. ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ–ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿ, ಪ್ರ: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1973.
4. ಮಹಾಭಾರತ ಸಮೀಕ್ಷೆ–ಸಂ: ನ.ಸುಬ್ರಹ್ಮಣ್ಯಂ, ಪ್ರ: ಟಿ.ಎಸ್ ವೆಂಕಟಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು,

ಚಿ. 1973.

5. ಪರಮದೇವ ಕವಿ ವಿರಚಿತ ಶ್ರೀ ತುರಂಗ ಭಾರತ – ಸಂ: ಕೆ. ಜಗನ್ನಾಥ ಶಾಸ್ತ್ರಿ ಪ್ರ: ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, 1986